**ಸಾಕ್ಷಿಯನ್ನು ದಿಃ 08.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ದಿಃ 29.03.1994 ರಲ್ಲಿ ನನ್ನ ತಾಯಿಯ ಪರವಾಗಿ ಆಗಿದೆ ಎಂದು ಹೇಳುವ ಕ್ರಯಪತ್ರದಲ್ಲಿ ಅಪ್ರಾಪ್ತ ಮಕ್ಕಳ ಹಕ್ಕುಗಳ ಬಗ್ಗೆ ಏನು ನಮೂದಾಗಿಲ್ಲ ಎಂದರೆ ತಂದೆ ಗಾರ್ಡಿಯನ್ ಆಗಿ ಸಹಿ ಮಾಡಿರುತ್ತಾರೆ ಎನ್ನುತ್ತಾರೆ. ಕ್ರಯಪತ್ರದಲ್ಲಿ ಅಪ್ರಾಪ್ತ ಮಕ್ಕಳ ಪಾಲನೆ, ಪೋಷಣೆ, ವಿದ್ಯಾಭ್ಯಾಸಕ್ಕಾಗಿ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆಗೆ ಮಧ್ಯಪಾನದ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ಅವರಿಗೆ ದುಷ್ಚಟಗಳು ಇದ್ದವು ಎಂದರೆ ಸರಿಯಲ್ಲ. ವಾದಿಗಳ ತಂದೆ ಹುಚ್ಚನಾಯಕರವರಿಗೆ ನನ್ನ ತಾಯಿ ಅಕ್ಕನಾಗಬೇಕು ಎಂದರೆ ಸರಿ. ದಿಃ 29.03.1994 ರಂದು ಕ್ರಯಪತ್ರವನ್ನು ನಾಮಿನಲ್ ಆಗಿ ಬರೆದುಕೊಟ್ಟಿದ್ದು ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶ ಇರದೇ ಹುಚ್ಚನಾಯಕರವರು ಆಸ್ತಿಯನ್ನು ಹಾಳು ಮಾಡುತ್ತಾರೆಂಬ ಉದ್ದೇಶದಿಂದ ಅದನ್ನು ರಕ್ಷಿಸಿಕೊಳ್ಳಲು ನಾಮಿನಲ್ ಆಗಿ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಬರೆದುಕೊಟ್ಟ ಕ್ರಯಪತ್ರವನ್ನು ದುರುಪಯೋಗ ಪಡಿಸಿಕೊಂಡು ನಾನು ಹಾಗೂ ನನ್ನ ತಾಯಿ ಸದರಿ ಆಸ್ತಿಯನ್ನು ತಮ್ಮದೇ ಎಂದು ಸುಳ್ಳು ಹಕ್ಕು ಸಾದಿಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯರ ತಂದೆ, ಅವರ ಚಿಕ್ಕಮ್ಮ, ಅವರ ಮಕ್ಕಳು, ವಾದಿಯ ತಂದೆಯ ಅಣ್ಣತಮ್ಮಂದಿರು ಕುಟುಂಬದ ಅವಶ್ಯಕತೆಗಾಗಿ ಒಟ್ಟು ಕುಟುಂಬದ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನಿಡಿ. 9 ಕ್ರಯಪತ್ರ ಸಹ ಒಟ್ಟು ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿದ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನಿಡಿ. 6 ರಲ್ಲಿನ ಕ್ರಯಪತ್ರದಲ್ಲೂ ಸಹ ಮರಂಕಮ್ಮ ಹಾಗೂ ಇತರರು ಒಟ್ಟು ಕುಟುಂಬದ ಅವಶ್ಯಕತೆಗಾಗಿ ಒಟ್ಟು ಕುಟುಂಬದ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ವಾದಿಗಳಿಗೆ ಕಾನೂನು ಬದ್ಧ ಹಕ್ಕು ಇದೆ ಎಂದರೆ ಸರಿಯಲ್ಲ. ನಿಡಿ. 11 ಅನ್ನು ನಾನು ಈ ಪ್ರಕರಣಕ್ಕೊಸ್ಕರ ಸೃಷ್ಟಿಸಿಕೊಂಡು ಹಾಜರು ಪಡಿಸಿದ್ದೇನೆ

ಎಂದರೆ ಸರಿಯಲ್ಲ. ವಾದಿಗಳ ಭಾಗಂಶಃದ ಹಕ್ಕನ್ನು ಕಿತ್ತುಕೊಳ್ಳವ ಉದ್ದೇಶದಿಂದ ನಿಡಿ. 11 ಅನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ವಾದಿ ಹಾಗೂ ಪ್ರತಿವಾದಿಗಳೆಲ್ಲ ದಾವ ಸ್ವತ್ತಿನಲ್ಲಿ ಜಂಟಿಯಾಗಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ. ವಾದಿಯರಿಗೆ ಕಾನೂನು ಪ್ರಕಾರ ಭಾಗಂಶದ ಹಕ್ಕಿದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.